ತರಗತಿಯಲ್ಲಿ ಓದಿ ಭರಮಣ್ಣನನ್ನು ಕೊಂಡಾಡಿದ್ದರು. ''ಏನೋ ಭರ್ಮಾ ನೀನೇ ಬ್ರೆಕ್ಟ್ ಥರ ಆಡ್ತೀಯಲ್ಲೋ'' ಎಂದು ಓಪನ್ ತರಗತಿಯಲ್ಲಿ ಕ್ಲಾಸ್‌ಮೇಟ್ ಒಬ್ಬ ರೇಗಿಸಿ ತಾನೂ ನಕ್ಕು ಹುಡುಗ, ಹುಡುಗಿಯರನ್ನೂ ನಗಿಸಿದ್ದ. ಆ ಕ್ಷಣ ಭರಮಣ್ಣನಿಗೆ ಡಿಎಸ್‌ಎಸ್ ಲೀಡರ್ ತನ್ನ ಹೆಸರಿನ ಬಗ್ಗೆ ಪ್ರಸ್ತಾಪಿಸಿದ್ದು ನೆನಪಾಗಿ ಏನೋ ಹೊಳೆದಂತಾಗಿ ಮುಖದಲ್ಲಿ ನಗೆ ಕಾಣಿಸಿಕೊಂಡಿತ್ತು. ಭರಮಣ್ಣ ತನ್ನ ಹೆಸರನ್ನು ಬದಲಾಯಿಸಿಕೊಳ್ಳಲು ಆ ಕ್ಷಣವೇ ನಿರ್ಧರಿಸಿದ್ದ! ಕಾಲೇಜು ಹತ್ತಿರವೇ ಇದ್ದ ಕೋರ್ಟ್ ಕಾಂಪ್ಲೆಕ್ಸಿಗೆ ಹೋಗಿ ಅಲ್ಲಿ ಸಾಲು ಸಾಲಾಗಿ ಕುಳಿತಿದ್ದ ನೋಟರಿಗಳಲ್ಲಿ ಒಬ್ಬರ ಮುಂದೆ ಕುಳಿತು ತನ್ನ ಸಮಸ್ಯೆಯನ್ನು ಹೇಳಿಕೊಂಡ. ಅರ್ಧ ಗಂಟೆಯಲ್ಲಿ ಒಂದು ಅಫಿಡವಿಟ್ ಸಿದ್ಧವಾಯಿತು. ಇನ್ನೂರು ರೂಪಾಯಿ ಸ್ಟಾಂಪ್ ಪೇಪರ್ ಮೇಲೆ ಹೀಗೆ ಘೋಷಿಸಿಕೊಳ್ಳಲಾಗಿತ್ತು: 'ದ್ವಾರನಕುಂಟೆಯ ಚಿಕ್ಕಮಾರಯ್ಯ ಮತ್ತು ನರಸಮ್ಮ ದಂಪತಿಯ ಮಗನಾದ ಭರಮಣ್ಣನೆಂಬ ನಾನು ಸ್ವಯಂ ಪ್ರೇರಿತನಾಗಿ ನನ್ನ ಹೆಸರನ್ನು ಡಿ.ಸಿ. ಬ್ರೆಕ್ಟ್ ಎಂಬುದಾಗಿ ಬದಲಾಯಿಸಿಕೊಂಡಿದ್ದೇನೆ. ಇನ್ನು ಮುಂದೆ ಪ್ರತಿಯೊಂದು ದಾಖಲೆ ಮತ್ತು ವ್ಯವಹಾರಗಳಲ್ಲೂ ನನ್ನ ಹೆಸರು ಡಿ.ಸಿ. ಬ್ರೆಕ್ಟ್ (ದ್ವಾರನಕುಂಟೆ ಚಿಕ್ಕಮಾರಯ್ಯನ ಮಗ ಬ್ರೆಕ್ಟ್) ಎಂದೇ ಇರುತ್ತದೆ...' ನೋಟರಿಯವರು ತಮ್ಮ ಸಹಿ ಹಾಕಿ, ಸೀಲು ಒತ್ತಿ, ಅಲ್ಲೆ ಕುಳಿತಿದ್ದ ತಮ್ಮ ಸ್ನೇಹಿತರಿಂದ ಸಾಕ್ಷಿಗಳಾಗಿ ಸಹಿ ಹಾಕಿಸಿ ಭರಮಣ್ಣ ಉರೂಫ್ ಬ್ರೆಕ್ಟನ ಸಹಿ ಹಾಕಿಸಿ ''ಒಳ್ಳೆಯದಾಗಲಿ'' ಎಂದು ಫೀಜು ಇಸಿದುಕೊಂಡು ಟೇಬಲ್ ಡ್ರಾಯರಿಗೆ ಹಾಕಿಕೊಂಡಿದ್ದರು. ಅಂದೇ ತಮ್ಮ ಹಾಸ್ಟೆಲ್ ಇದ್ದ ಎಂ.ಜಿ. ರಸ್ತೆಯಲ್ಲಿನ ಪ್ರಸಿದ್ಧ ಕನ್ನಡ ಪತ್ರಿಕೆಯ ಆಫೀಸಿಗೆ ಹೋಗಿ ಜಾಹೀರಾತು ಕೊಟ್ಟು ಬಂದನು. ಮಾರನೆಯ ದಿನ ಬೆಳಗ್ಗೆಯೇ ಭರಮಣ್ಣನ ಹೆಸರು 'ಬ್ರೆಕ್ಟ್' ಆಗಿ ಬದಲಾಗಿರುವುದು ಫೋಟೊ ಸಮೇತ ಪ್ರಕಟವಾಗಿತ್ತು. ಬ್ರೆಕ್ಟನು ಆರು ಪತ್ರಿಕೆಯ ಪತ್ರಿಕೆಗಳನ್ನು ಕೊಂಡು ತಂದು ಜಾಹೀರಾತಿನ ಭಾಗವನ್ನು ಕತ್ತರಿಸಿ ಇಟ್ಟುಕೊಂಡನಲ್ಲದೆ ಅಫಿಡವಿಟ್‌ನ ಹತ್ತು ಜೆರಾಕ್ಸ್ ಕಾಪಿಗಳನ್ನೂ ಮಾಡಿಸಿಟ್ಟುಕೊಂಡ. ಜಾಹೀರಾತು ಮತ್ತು ಅಫಿಡವಿಟ್‌ನ ನಾಲ್ಕು ಸೆಟ್ ಮಾಡಿ ಕಾಲೇಜು, ಯೂನಿವರ್ಸಿಟಿ, ಪಿಯುಸಿ ಬೋರ್ಡ್, ಎಸ್‌ಎಸ್‌ಎಲ್‌ಸಿ ಬೋರ್ಡ್ ಎಲ್ಲಾ ಕಡೆಗೂ ಕೊಟ್ಟು ಬಂದ. ಇದಾದ ಮೂರನೇ ದಿನ ತರಗತಿಯಲ್ಲಿ ಅಟೆಂಡೆನ್ಸ್ ಕೂಗುವಾಗ ಬ್ರೆಕ್ಟ್ ಎಂದು ಕೂಗಿದಾಗ ಭರಮಣ್ಣ ಎದ್ದು ''ಎಸ್ ಸಾರ್'' ಎಂದಿದ್ದ. ತರಗತಿಯಲ್ಲಿ ಸ್ಟೂಡೆಂಟ್ಸ್ ಅಚ್ಚರಿಗೊಂಡಿದ್ದರೆ ಕನ್ನಡ ಉಪನ್ಯಾಸಕರಾದ ಸಂಗಯ್ಯನವರು ಮಾತ್ರ ''ಹೆಸರು ಚೆನ್ನಾಗಿದೆರಿ ಮಿಸ್ಟರ್ ಬ್ರೆಕ್ಟ್'' ಎಂದು ಹೇಳಿ, ತಾನೂ ಕಾಲೇಜು ಓದುವಾಗಲೇ 'ಶೇಕ್ಸ್‌ಪಿಯರ್' ಎಂದು ಹೆಸರು ಬದಲಾಯಿಸಿಕೊಳ್ಳಬಹುದಿತ್ತಲ್ಲ ಎಂಬ ಒಂದು ಸಣ್ಣ ವ್ಯಾಕುಲತೆಗೆ ಒಳಗಾದರು!

ಹೆಸರು ಬದಲಾಯಿಸಿಕೊಂಡಿದ್ದಕ್ಕೆ ಬ್ರೆಕ್ಟನಿಗೆ ಬೆಂಗಳೂರಿನಲ್ಲಿ ಅಂಥ ಸಮಸ್ಯೆಯೇನೂ ಆಗಲಿಲ್ಲ. ತಾಪತ್ರಯಗಳಾಗಿದ್ದು ಊರಿನಲ್ಲಿ. ಬ್ರೆಕ್ಟನ ಕಾಲೇಜಿನಲ್ಲಿಯೇ ಫೈನಲ್ ಇಯರಿನಲ್ಲಿ ಓದುತ್ತಿರುವ ದ್ವಾರನಕುಂಟೆಯ ಪಕ್ಕದ ಊರಿನ ಮುದ್ದಯ್ಯನ ಪಾಳ್ಯದ ಚಂದ್ರಶೇಖರನು ಊರಿಗೆ ಹೋದಾಗ ದ್ವಾರನಕುಂಟೆಗೂ ಹೋಗಿ ಭರಮಣ್ಣ ಡಿ.ಸಿ. ಬ್ರೆಕ್ಟನಾಗಿ ಹೆಸರು ಬದಲಾಯಿಸಿಕೊಂಡಿರುವ ಸುದ್ದಿಯನ್ನು ಬಲವಾಗಿ ಹರಡಿ ಬಂದಿದ್ದ. ಬ್ರೆಕ್ಟ್ ಊರಿಗೆ ಹೋದಾಗ ಅಪ್ಪ ಚಿಕ್ಕಮಾರಯ್ಯ ''ಅಲ್ವೊ ಭರ್ಮಾ ಅದೆಂತಾದ್ಲ ಅದು ಬಾಯಲ್ಲಿ ಹೊರಳ್ದಿರೊ ಹೆಸರ್ನ ಇಟ್ಕಂಡಿದ್ದೀಯಂತೆ. ಯಾರ್ಲ ನಿಂಗೆ ಹೇಳಿದ್ದು'' ಎಂದು ತಗುಲಿಕೊಂಡರೆ, ತಾಯಿ ನರಸಮ್ಮ ''ಅಲ್ಲಾ ಕಣ್ಮಗ ನಮ್ಮೂರು ಭರಮಪ್ಪನಿಗೆ ಗಂಡು ಮಗ ಆದ್ರೆ ನಿನ್ನೆಸ್ರ ಇಡ್ತೀನಪ್ಪ ಅಂತ ಹರ್ಕೆ ಹೊತ್ ಮೇಲೆ ನೀನುಟ್ಟಿದ್ದು. ಹಂಗಾಗಿ ಆಯಪ್ಪನ ಹೆಸ್ರ ನಿಂಗಿಟ್ಟಿದ್ದಾಯ್ತು. ಅಂಥದ್ರಾಗೆ ಹೆಸ್ರ್ ಬದ್ಲಾಯಿಸ್ಕಂಡ್ರೆ ಆ ಭರಮಪ್ಪ ಸುಮ್ಕಿದ್ದಾನ'' ಎಂದು ವ್ಯಥೆಗೊಂಡಿದ್ದಳು. ಇಬ್ಬರನ್ನೂ ಹಂಗಲ್ಲ ಹಿಂಗೆ ಎಂದು ಸಮಾಧಾನಪಡಿಸಿದ್ದ. ಹಟ್ಟಿಯ